RNU AIR DHARWAD

# APRIL 20, 2024

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ದುರ್ಬಲ ವರ್ಗದ ಮತದಾರರಲ್ಲಿ, ಧೈರ್ಯ ಸ್ಥೈರ್ಯ ತುಂಬಿ; ಕೇಂದ್ರ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ನಿರ್ದೇಶನ.
- 'ಓದು ಬರಹ ಬಲ್ಲವನು, ವಿದ್ಯಾವಂತ; ಮತ ಚಲಾಯಿಸುವವನು ಪ್ರಜ್ಞಾವಂತ!' – ಧ್ಯೇಯದೊಂದಿಗೆ, ಮತದಾರ ಜಾಗ್ರತಿ.
- ರಾಜ್ಯದ 14 ಲೋಕಸಭಾ ಕ್ಷೇತ್ರಗಳ, ಎರಡನೇ ಹಂತದ ಚುನಾವಣೆಗೆ ಸಲ್ಲಿಕೆಯಾದ, ನಾಮಪತ್ರಗಳ ಪರಿಶೀಲನೆ, ಇಂದು.
- ರಾಜ್ಯದ ವಿವಿಧೆಡೆ ತೀವ್ರ ಬರ ಹಾಗೂ ಪ್ರಖರ ಬಿಸಿಲು; ಜಿಲ್ಲಾಡಳಿತಗಳಿಂದ ಮುಂಜಾಗ್ರತಾ ಕ್ರಮ.

<><><>

**ಈಗ ವಾರ್ತೆಗಳ ವಿವರ**

<><><>

18ನೇ ಲೋಕಸಭೆ ಚುನಾವಣೆಯ, ಎರಡನೇ ಹಂತದ ಮತದಾನ, ಈ ತಿಂಗಳ 26 ರಂದು ನಡೆಯಲಿದ್ದು, ರಾಜ್ಯದ 14 ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡ, ಪ್ರಥಮ ಹಂತದ ಮತದಾನಕ್ಕೆ ಭರದ ಸಿದ್ಧತೆಗಳು 14 ಜಿಲ್ಲೆಗಳಲ್ಲಿ ನಡೆದಿವೆ.

ಮತದಾನದ ಸಮಗ್ರ ಸಿದ್ಧತೆ ಕುರಿತು, ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಹೊಸ ದಿಲ್ಲಿಯಲ್ಲಿ ಚುನಾವಣಾಧಿಕಾರಿಗಳೊಂದಿಗೆ ಮಹತ್ವದ ಸಮಾಲೋಚನಾ ಸಭೆ ನಡೆಸಿದರು.

13 ರಾಜ್ಯಗಳಲ್ಲಿ ಹರಡಿರುವ 88 ಲೋಕಸಭಾ ಕ್ಷೇತ್ರಗಳಿಗೆ ಈ ಹಂತದಲ್ಲಿ ಮತದಾನ ನಡೆಯಲಿದ್ದು, 250 ಚುನಾವಣಾ ವೀಕ್ಷಕರನ್ನು ನೇಮಿಸಲಾಗಿದೆ. ಈ ವೀಕ್ಷಕರೊಂದಿಗೆ ಮುಖ್ಯ ಚುನಾವಣಾ ಆಯುಕ್ತರು, ವಿಡಿಯೋ ಸಂವಾದ ನಡೆಸಿದರು.

ದುರ್ಬಲ ವರ್ಗದ ಮತದಾರರಲ್ಲಿ ಧೈರ್ಯ ಸ್ಥೈರ್ಯ ತುಂಬುವ ಜೊತೆಗೆ, ಸೂಕ್ಷ್ಮ ವೀಕ್ಷಕರನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳಬೇಕು ಎಂದು, ಕೇಂದ್ರ ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದರು.

ದೇಶದ ಹಲವೆಡೆ ತಾಪಮಾನ ಹೆಚ್ಚಾಗಿದ್ದು, ಮತದಾರರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಅವರು ಸೂಚಿಸಿದರು.

<><><>

18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನೆಲೆ, ರಾಜ್ಯಾದ್ಯಂತ ಜಿಲ್ಲಾವಾರು ಸ್ವೀಪ್ ಸಮಿತಿಗಳು, 'ನಿಮ್ಮ ಮತ; ನಿಮ್ಮ ಧ್ವನಿ', ಧ್ಯೇಯದೊಂದಿಗೆ, ಪ್ರಜ್ಞಾವಂತಿಕೆಯಿಂದ ಮತ ಚಲಾಯಿಸಿ, ಸಮರ್ಥರನ್ನು ಆರಿಸಿ, ಎಂದು ಜನ ಜಾಗ್ರತಿ ಮೂಡಿಸುತ್ತಿವೆ.

'ಓದು ಬರಹ ಬಲ್ಲವನು, ವಿದ್ಯಾವಂತ; ಮತ ಚಲಾಯಿಸುವವನು ಪ್ರಜ್ಞಾವಂತ!' ಎಂಬ ಧ್ಯೇಯದೊಂದಿಗೆ, ಮತದಾರ ಜಾಗ್ರತಿ ಮ್ಯಾರಥಾನ್‌ಗೆ, ಚಿತ್ರದುರ್ಗ ಜಿಲ್ಲಾ ಆಯುಷ್ ಅಧಿಕಾರಿ ಶಿವಕುಮಾರ್, ಚಾಲನೆ ನೀಡಿದರು.

ಶಿವಮೊಗ್ಗ ಅಂಚೆ ಇಲಾಖೆ ವತಿಯಿಂದ, ಇದೇ 23 ರಂದು, ನಗರದ ವಿವಿಧೆಡೆ ಸಿಬ್ಬಂದಿ, ಮತದಾರ ಜಾಗ್ರತಿ ಬೀದಿ ನಾಟಕವನ್ನು ಪ್ರದರ್ಶಿಸಲಿದ್ದಾರೆ.

'ನಮ್ಮ ನಡೆ ಮತಗಟ್ಟೆ ಕಡೆ' ಕಾರ್ಯಕ್ರಮವನ್ನು, ಶಿವಮೊಗ್ಗ ಜಿಲ್ಲೆ ಸ್ವೀಪ್ ಸಮಿತಿ ಅಧ್ಯಕ್ಷರಾದ ಸ್ನೇಹಲ್ ಸುಧಾಕರ ಲೋಖಂಡೆ ಉದ್ಘಾಟಿಸಿದರು.

ರಾಜ್ಯದ ನೂತನ 31ನೇ ಜಿಲ್ಲೆ, ವಿಜಯನಗರದ ಚುನಾವಣಾ ರಾಯಬಾರಿ, ಪದ್ಮಶ್ರೀ ಪುರಸ್ಕೃತ ಮಂಜಮ್ಮ ಜೋಗತಿ ಅವರು, ಕಡ್ಡಾಯವಾಗಿ ಮತ ಚಲಾಯಿಸುವಂತೆ ಆಕಾಶವಾಣಿ ಮೂಲಕ ಮನವಿ ಮಾಡಿದ್ದಾರೆ.

<><><>

ಪದ್ಮಶ್ರೀ ಬಿ. ಮಂಜಮ್ಮ ಜೋಗತಿ ಧ್ವನಿ 45 ಸೆಕೆಂದುಗಳು

<><><>

ರಾಜ್ಯದ ಎರಡನೇ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ, ನಾಮಪತ್ರ ಸಲ್ಲಿಸಲು ನಿನ್ನೆ ಕೊನೆಯ ದಿನವಾಗಿತ್ತು.

ಇಂದು ಶನಿವಾರ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಡಿದ್ದು ಸೋಮವಾರ 22 ರಂದು ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿದೆ. ಮೇ 7, ಮಂಗಳವಾರ ಮತದಾನ ನಿಗದಿಯಾಗಿದೆ.

ಯಾದಗಿರಿ ಜಿಲ್ಲೆ, ಸುರಪುರ ವಿಧಾನಸಭಾ ಕ್ಷೇತ್ರದ, ಪರಿಶಿಷ್ಟ ಪಂಗಡ ಉಪಚುನಾವಣೆಯಲ್ಲಿ ಸ್ಪರ್ಧಿಸ ಬಯಸಿ, ಕೊನೆಯ ದಿನವಾದ ನಿನ್ನೆ ಐವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಬಳ್ಳಾರಿ ಲೋಕಸಭಾ ಮತಕ್ಷೇತ್ರದಿಂದ 13 ಜನ ನಾಮಪತ್ರ ಸಲ್ಲಿಸಿದ್ದಾರೆ.

ರಾಯಚೂರು ಲೋಕಸಭಾ ಕ್ಷೇತ್ರದಿಂದ, ಒಟ್ಟು ಆರು ಅಭ್ಯರ್ಥಿಗಳು ಸೇರಿದಂತೆ, 11 ಅಭ್ಯರ್ಥಿಗಳು, 21 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಶಿವಮೊಗ್ಗದಲ್ಲಿ ಒಟ್ಟು 14 ನಾಮಪತ್ರಗಳು, ಹಾವೇರಿಯಲ್ಲಿ 9 ಅಭ್ಯರ್ಥಿಗಳಿಂದ 20 ನಾಮಪತ್ರ ಸಲ್ಲಿಕೆಯಾಗಿವೆ.

ಉತ್ತರಕನ್ನಡ ಜಿಲ್ಲೆಯಲ್ಲಿ 2 ನಾಮಪತ್ರಗಳು ಸಲ್ಲಿಕೆಯಾಗಿವೆ. 19 ಅಭ್ಯರ್ಥಿಗಳು ಒಟ್ಟು 36 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಧಾರವಾಡದಲ್ಲಿ 11 ಜನ ಅಭ್ಯರ್ಥಿಗಳು, ಕೊನೆಯ ದಿನವಾದ ನಿನ್ನೆ, 12 ನಾಮಪತ್ರಗಳನ್ನು ಸಲ್ಲಿಸಿದ್ದಾರೆ ಎಂದು, ಚುನಾವಣಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಲೋಕಸಭೆ ಚುನಾವಣೆ ಹಿನ್ನೆಲೆ, ರಾಯಚೂರು ಜಿಲ್ಲೆಯ ಸಾಮಾನ್ಯ ವೀಕ್ಷಕರಾಗಿ ಅಜಯ್ ಪ್ರಕಾಶ ಅವರನ್ನು, ಆಯೋಗ ನಿಯೋಜಿಸಿದೆ. ಸಾರ್ವಜನಿಕರ ಭೇಟಿಗೆ ಅವಕಾಶ ಕಲ್ಪಿಸಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಎಲ್.ಚಂದ್ರಶೇಖರ ನಾಯಕ ತಿಳಿಸಿದ್ದಾರೆ.

ಉತ್ತರಕನ್ನಡ ಜಿಲ್ಲೆಗೆ ಭಾರತ ಚುನಾವಣಾ ಆಯೋಗದಿಂದ, ಸಾಮಾನ್ಯ ವೀಕ್ಷಕರಾಗಿ ರಾಜೀವ್ ರತನ್ ನಿಯೋಜಿತರಾಗಿದ್ದಾರೆ. ಚುನಾವಣಾ ದೂರುಗಳ ಪರಿಶೀಲನೆಗಾಗಿ ವೀಕ್ಷಕರು ತಮ್ಮ ನಿಯೋಜಿತ ಮತಕ್ಷೇತ್ರಗಳಿಗೆ ಆಗಮಿಸುತ್ತಿದ್ದಾರೆ.

ರಾಜ್ಯದಲ್ಲಿ, ಮೊದಲ ಹಂತದ ಲೋಕಸಭಾ ಚುನಾವಣೆ, ಮತದಾನದ ದಿನಾಂಕ, ಸಮೀಪಿಸುತ್ತಿರುವ ಹಿನ್ನೆಲೆ, ಚುನಾವಣಾ ಸಿಬ್ಬಂದಿ, ಚೆಕ್‌ಪೋಸ್ಟ್‌ಗಳಲ್ಲಿ ಕಣ್ಗಾವಲು ಚುರುಕುಗೊಳಿಸಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಸೂಕ್ತ ದಾಖಲೆ ಇಲ್ಲದೇ ಸಾಗಿಸುತ್ತಿದ್ದ, 5 ಲಕ್ಷ 43 ಸಾವಿರದ 750 ರೂಪಾಯಿ ನಗದು ವಶ ಪಡಿಸಿಕೊಳ್ಳಲಾಗಿದೆ.

<><><>

ಗದಗ ಜಿಲ್ಲೆ, ರೋಣ ತಾಲೂಕಿನಲ್ಲಿ ಜನ ಮತ್ತು ಜಾನುವಾರುಗಳಿಗೆ, ಕುಡಿಯುವ ನೀರಿನ ಕೊರತೆ ಆಗದಂತೆ ನೋಡಿಕೊಳ್ಳಬೇಕೆಂದು, ರೋಣ ತಾಲೂಕಾ ಬರ ನಿರ್ವಹಣೆ ನೋಡಲ್ ಅಧಿಕಾರಿ, ಮಹೇಶ ಕುಮಾರ ವಾಗೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ, ವಾಣಿ ವಿಲಾಸ ಸಾಗರ, ಐಮಂಗಲ ಹಾಗೂ ಹೊಳಲ್ಕೆರೆ ತಾಲೂಕಿನ ಬಹುಗ್ರಾಮ ಕುಡಿಯುವ ನೀರಿನ, ಕಾಮಗಾರಿಯ ಪ್ರಗತಿ ಪರಿಶೀಲಿಸಿದರು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೀರಿನ ಕೊರತೆ ಎದುರಾಗುತ್ತಿದ್ದು, ಸಾರ್ವಜನಿಕರು ಅನವಶ್ಯಕವಾಗಿ ನೀರನ್ನು ಬಳಸಿ, ಪೋಲು ಮಾಡದೇ, ಮಿತವಾಗಿ ಬಳಸುವಂತೆ, ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಕೋರಿದ್ದಾರೆ.

ಬಿರು ಬೇಸಿಗೆ ಹಾಗೂ ತೀವ್ರ ಬರದ ಹಿನ್ನೆಲೆ, ರಾಜ್ಯದ ಕೆಲವೆಡೆ ಕಾಲರಾ ಪ್ರಕರಣಗಳು ವರದಿಯಾಗುತ್ತಿರುವ ಕಾರಣ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಆರೋಗ್ಯ ಇಲಾಖೆ, ಹಲವು ಮುಂಜಾಗ್ರತಾ ಕ್ರಮ ಕೈಗೊಂಡಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಎಸ್.ಎಸ್.ಮಹೇಶ್ ಕುಮಾರ್, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಎಸ್.ಎಸ್.ಮಹೇಶ್ ಕುಮಾರ್ ಧ್ವನಿ 45 ಸೆಕೆಂದುಗಳು

<><><>

ರಾಜ್ಯದ ಕರಾವಳಿ ಸೇರಿದಂತೆ, ಉತ್ತರ ಒಳನಾಡಿನ ಬಹುತೇಕ ಕಡೆ, ಬಿಸಿಲಿನ ಪ್ರಖರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. 36 ರಿಂದ 38 ಡಿಗ್ರಿ ಸೆಲ್ಸಿಯಸ್ ವರೆಗೆ ತಾಪಮಾನ ದಾಖಲಾಗುತ್ತಿದೆ.

ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲಾಡಳಿತಗಳು, ಚುನಾವಣಾ ಕರ್ತವ್ಯ ನಿರತ ಸಿಬ್ಬಂದಿ ಸೇರಿದಂತೆ, ಸಾರ್ವಜನಿಕರಿಗೆ ಚಿಂಚಾ ಪಾನಕ ಪರಿಚಯಿಸಲು, ವಿಶೇಷ ಪ್ರಯತ್ನ ಕೈಗೊಂಡಿವೆ.

ಬಿಸಿಲಿನ ಝಳದಿಂದ ಪಾರಾಗಲು, ಜನರಿಗೆ ಹುಣಸೆ ಹಣ್ಣು ಬಳಸಿ, ಚಿಂಚಾ ಪಾನಕ ತಯಾರಿಸಿ ಕುಡಿಯಲು, ಆಯುಷ್ ಇಲಾಖೆ ಸಲಹೆ ನೀಡಿದೆ.

ಉತ್ತರಕನ್ನಡ ಜಿಲ್ಲಾ ಆಯುಷ್ ವೈದ್ಯಾಧಿಕಾರಿ, ಡಾಕ್ಟರ್ ಲಲಿತಾ ಶೆಟ್ಟಿ, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಲಲಿತಾ ಶೆಟ್ಟಿ ಧ್ವನಿ 40 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಗವಾನ್ ಶ್ರೀ ಮಹಾವೀರ ಜಯಂತಿಯನ್ನು, ನಾಳೆ ರಾಜ್ಯಾದ್ಯಂತ ಶ್ರದ್ಧಾ ಭಕ್ತಿಯಿಂದ, ಸರಳವಾಗಿ ಆಚರಿಸಲು ಪೂರ್ವ ಸಿದ್ಧತೆಗಳು ನಡೆದಿದೆ.

<><><>

ಪ್ರಸಕ್ತ ಸಾಲಿನ, ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿಗೆ, ಧಾರವಾಡದ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಇಟಗಿ ಭಾಜನರಾಗಿದ್ದಾರೆ. ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಇಂದು ಸಂಜೆ 6 ಗಂಟೆಗೆ, ಕಾರ್ಯಾಧ್ಯಕ್ಷ ಚಂದ್ರಕಾಂತ ಬೆಲ್ಲದ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು ರಾಜ್ಯಕ್ಕೆ ಆಗಮಿಸಿ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಲೋಕಸಭಾ ಕ್ಷೇತ್ರಗಳ, ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ದುರ್ಬಲ ವರ್ಗದ ಮತದಾರರಲ್ಲಿ, ಧೈರ್ಯ ಸ್ಥೈರ್ಯ ತುಂಬಿ; ಕೇಂದ್ರ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ನಿರ್ದೇಶನ.
- 'ಓದು ಬರಹ ಬಲ್ಲವನು, ವಿದ್ಯಾವಂತ; ಮತ ಚಲಾಯಿಸುವವನು ಪ್ರಜ್ಞಾವಂತ!' – ಧ್ಯೇಯದೊಂದಿಗೆ, ಮತದಾರ ಜಾಗ್ರತಿ.

- ರಾಜ್ಯದ 14 ಲೋಕಸಭಾ ಕ್ಷೇತ್ರಗಳ, ಎರಡನೇ ಹಂತದ ಚುನಾವಣೆಗೆ ಸಲ್ಲಿಕೆಯಾದ, ನಾಮಪತ್ರಗಳ ಪರಿಶೀಲನೆ, ಇಂದು.
- ರಾಜ್ಯದ ವಿವಿಧೆಡೆ ತೀವ್ರ ಬರ ಹಾಗೂ ಪ್ರಖರ ಬಿಸಿಲು; ಜಿಲ್ಲಾಡಳಿತಗಳಿಂದ ಮುಂಜಾಗ್ರತಾ ಕ್ರಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

ಹರ್ಷ